ತನ್ನ ಒಂದು ಕಿರುಬೆರಳನ್ನು ಮೇಲೆತ್ತಿದರೂ ಸಾಕು, ಜನ ತನ್ನ ಇಷ್ಟಾರ್ಥಗಳನ್ನು ಪೂರೈಸಲು ಮುಗಿಬೀಳುತ್ತಾರೆಂದು ಮಿಸೆಸ್ ಬ್ರಿಗ್ಸಳಿಗೆ ಅನಿಸತೊಡಗಿತು. ಅವಳೊಳಗೆ ಏಳುತ್ತಿದ್ದ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಅವಳಿಗೆ ಸಾಧ್ಯವಾಗಲೇ ಇಲ್ಲ. ಮಿಸೆಸ್ ಬ್ರಿಗ್ಸಳ ಗ್ಯಾನ ಕಡೆಗೂ ರಟ್ಟಿನ ಪೆಟ್ಟಿಗೆಯೊಳಗಿದ್ದ ಲಕೋಟೆಯ ಕಡೆಗೆ ಹರಿಯಿತು. ಅವಳು ಅದನ್ನು ಹರಿದು ಅದರೊಳಗಿದ್ದ ಕಾಗದವನ್ನು ಹೊರತೆಗೆದಳು.

'...ಡಿಯರ್, ನೀನು ಎಂದೋ ನನಗೆ ಒಮ್ಮೆಯಾದರೂ ಮಿಂಕ್ ಕೋಟು ಧರಿಸಬೇಕು ಎಂಬ ಆಸೆ ಇದೆ ಎಂದು ಹೇಳಿದ್ದು ಜ್ಞಾಪಕಕ್ಕೆ ಬಂದಿತು. ಆ ಕಾರಣಕ್ಕಾಗಿ ಈ ಕೋಟನ್ನು ನಿನಗಾಗಿಯೇ ಖರೀದಿಸಿದ್ದೇನೆ. ನಿನಗೆ ಇಷ್ಟವಾಯಿತು ಎಂದು ನನ್ನ ಅನಿಸಿಕೆ. ಕೆಲವು ವೈಯಕ್ತಿಕ ಕಾರಣಗಳಿಂದಾಗಿ ಇದು ನಮ್ಮಿಬ್ಬರ ನಡುವಿನ ಕೊನೆಯ ಭೇಟಿ ಎಂದು ತಿಳಿಸಲು ತುಂಬಾ ವಿಷಾದವಾಗುತ್ತಿದೆ ಡಿಯರ್. ನಿನಗೆ ಒಳ್ಳೆಯದಾಗಲಿ..."

ಮಿಸೆಸ್ ಬ್ರಿಗ್ಸಳ ತಲೆ ಮೇಲೆ ಒಮ್ಮೆಲೆ ಸಿಡಿಲೆರಗಿದಂತಾಯಿತು. ಈ ವರೆಗೆ ಯಾವುದೇ ಅಡ್ಡಿ ಆತಂಕಗಳಿಲ್ಲದಂತೆ ಸಾಗರದಲ್ಲಿ ಶಾಂತವಾಗಿ ಮುನ್ನಡೆಯುತ್ತಿದ್ದ ಅವಳ ನಾವೆ ಒಮ್ಮೆಲೇ ಚಂಡಮಾರುತಕ್ಕೆ ಎದುರಾದಂತಾಯಿತು. ಕರ್ನಲ್ ಸಾಹೇಬರಿಲ್ಲದ ಜೀವನ ಬರಿದು, ಸಾರರಹಿತವಾದುದೆಂದು ಆಕೆಗೆ ಮನದಟ್ಟಾಗತೊಡಗಿತು. ಜೀವನವೆಂದರೆ ಹೀಗೇ ಏನೋ! ಒಂದು ಕಡೆ ಕಳೆದುಕೊಂಡಿದ್ದು ಮತ್ತೊಂದೆಡೆಯಿಂದ ತುಂಬಿ ಬರುತ್ತದೆ! ಕರ್ನಲ್ ಸಾಹೇಬರು ಕೊಟ್ಟ ಮಿಂಕ್ ಕೋಟನ್ನು ಮಿಸೆಸ್ ಬ್ರಿಗ್ಸ್ ಎದೆಗೆ ಅವುಚಿಕೊಂಡಳು. ಕರ್ನಲ್ ಸಾಹೇಬರ ಕಾಗದವನ್ನು ಹರಿದು ಎಸೆಯಬೇಕೆನ್ನಿಸುವಷ್ಟರಲ್ಲಿ ಮತ್ತೊಂದು ಬದಿಯಲ್ಲಿ ಮತ್ತೇನೋ ಗೀಚಿರುವುದು ಮಿಸೆಸ್ ಬ್ರಿಗ್ಸಳಿಗೆ ಕಂಡಿತು.



'ಇದು ನಿನ್ನ ಚಿಕ್ಕಮ್ಮ ಕೊಟ್ಟ ಕ್ರಿಸ್ಮಸ್ ಕಾಣಿಕೆ ಎಂದು ನಿನ್ನ ಮನೆಯವರಿಗೆ ಹೇಳಲು ಮರೆಯಬೇಡ ಡಿಯರ್... ಇಲ್ಲದಿದ್ದಲ್ಲಿ ಫಜೀತಿ ಆದೀತು!' ಕರ್ನಲ್ ಸಾಹೇಬರು ಎಚ್ಚರಿಕೆ ಕೊಟ್ಟಿದ್ದರು.

ಮಿಸೆಸ್ ಬ್ರಿಗ್ಸಳಿಗೆ ಆ ಕ್ಷಣದಲ್ಲೂ ನಗು ಬಂದಿತು. ಕರ್ನಲ್ ಸಾಹೇಬರಿಗೆ ತಲೆ ಸರಿ ಇದೆ ತಾನೆ? ಆಕೆ ಅಚ್ಚರಿಪಟ್ಟಳು. ಈ ಮಿಂಕ್ ಕೋಟನ್ನು ತನ್ನ ಚಿಕ್ಕಮ್ಮ ಕ್ರಿಸ್ಮಸ್ ಪ್ರೆಸೆಂಟ್ ಕೊಟ್ಟಿದ್ದು ಎಂದು ತನ್ನ ಗಂಡ ಸಿರಿಲನಿಗೆ ಹೇಳಿದರೆ ಅವನು ನಗಬಾರದ ಜಾಗದಿಂದ ನಗುವುದರಲ್ಲಿ ಏನೂ ಆಶ್ಚರ್ಯವಿರಲಿಲ್ಲ. ಮಿಂಕ್ ಕೋಟು ಮತ್ತು